ಜಗಳದಂತಿದೆಯಲ್ಲ' ಅಂದರು. ಮರಳು ಸುಣ್ಣ ಮಿಶ್ರಣದ ಗಾರೆಯ ಗುಂಡು ಹೊಡೆಸುತ್ತಿದ್ದವನು, 'ಸ್ವಾಮಿ ಇವಳು ವಿದಿಶಾ ನಗರದಾಚೆಯ ಕಾಡು ಹಾದಿಯಲ್ಲಿದ್ದ ಅರವಟಿಗೆಯಲ್ಲಿ ಒಬ್ಬಳೇ ಬೆಳೆದವಳು, ಜನಸಂಬಂಧವಿಲ್ಲ. ಇಲ್ಲಿ ಜಗಳವಾಡಿದಲ್ಲಿ ಮಾತ್ರ ರಾತ್ರಿ ಇವಳಿಗೆ ನಿದ್ದೆ. ಇಲ್ಲದಿದ್ದರೆ ಮಲಗುವಲ್ಲಿ ಎಲ್ಲರ ಮೇಲೂ ಗದ್ದಲ ತೆಗೆಯುವಳು. ಇವಳ ತಾಯಿ ಅದೇ ಛತ್ರದಲ್ಲಿ ದಾಸಿಯಾಗಿ ಕಸ ಗುಡಿಸಿ, ಪಾತ್ರೆ ತೊಳೆದು ಇರಲಾಗಿ, ಒಮ್ಮೆ ದಾರಿಹೋಕನೊಬ್ಬ ವಾರಕಾಲ ತಂಗಲು ಇವಳಿಗೂ ಅವನಿಗೂ ನಿಯೋಗವಾಯಿತಂತೆ. ಹಾಗೆ ಹುಟ್ಟಿದ ಈ ಹೆಣ್ಣು ಅರವಟಿಗೆಯಲ್ಲೇ ಬೆಳೆದವಳು. ಕಸ ಗುಡಿಸಿದ ಕಾಯಕದ, ಹೋಗಿ ಬರುವ ಸಾರ್ಥರು ಕೊಟ್ಟ ದುಡ್ಡುದುಗ್ಗಾಣಿಯಿಂದ ದಾಸಿಯು ನಮ್ಮ ಅರಸ ಅಜಿತಸೇನರ ಬಾಡಿಗೆ ಭಂಟನೊಬ್ಬನಿಗೆ ಇವಳ ವಿವಾಹ ನೆರವೇರಿಸಿದಳಂತೆ. ಆಗೀಗ ಯುದ್ಧ, ಹೊಡೆದಾಟಗಳಿಂದ ಹಿಂದಿರುಗುತ್ತಿದ್ದ ಭಟನು ಅವನ ಆಯಾಸವನ್ನೆಲ್ಲ ಈ ಹೆಂಗಸಿಗೆ ಬೈದು, ಹೊಡೆದು ತೀರಿಸಿಕೊಳ್ಳುವಲ್ಲಿ, ನೀನು ಯಾರಿಗೆ ಹುಟ್ಟಿದವಳು ಮೊದಲು ಹೇಳು, ಆಮೇಲೆ ನಾನು ಸೈನ್ಯದ ಮೇಲೆ ಹೋಗಿ ಆರು ತಿಂಗಳಾಯಿತು. ಈ ಕೂಸು ಯಾರಿಗೆ ಹುಟ್ಟಿದ್ದು ಬೊಗಳು ಎನ್ನುವಲ್ಲಿ ಬಿದ್ದ ಭಾರಿ ಏಟು ಕೂಸಿಗೂ ತಗುಲಿತು.

ಅರ್ಧರಾತ್ರಿಯಲ್ಲಿ ಮಗುವನ್ನು ಎತ್ತಿಕೊಂಡು ಗಂಡನನ್ನು ತೊರೆದು ಯಾವುದೋ ಕಣ್ಣೆದುರು ಕಂಡ ಹಾದಿಯಲ್ಲಿ ನಡೆಯುತ್ತಿದ್ದಳಂತೆ. ಎತ್ತ ಹೋಗಬೇಕೆಂದು ಗೊತ್ತಿಲ್ಲ. ದಾರಿಯಲ್ಲಿ ಕಾವಲು ತಳಾರರು ಎದುರಾಗಿ, 'ಎಲಾ ಹೆಂಗಸೇ ಈ ಕಾಡಿನ ಹಾದಿಯಲ್ಲಿ ಯಾಕೆ ಒಬ್ಬಳೇ ಹೊರಟಿದ್ದೀಯೆ. ನಿನ್ನ ಮೈಕಟ್ಟು ನೋಡಿದರೆ ಹಳ್ಳಿಯ ಸೂಳೆ ಎನಿಸುತ್ತಿದೆ. ಈ ಕಾಡಿನಲ್ಲಿ ನಿನಗೆ ವಿಟಪುರುಷರು ಎಲ್ಲಿ ಸಿಗುತ್ತಾರೆ' ಎಂದೆಲ್ಲಾ ದಾಸಿ ಪುತ್ರಿಗೆ ಕೇಳುತ್ತಾ, 'ಅದೇನು ನಿನ್ನ ಕೈಯ್ಯ ಗಂಟು' ಎಂದು ಅದನ್ನು ಬಿಡಿಸಿ ನೋಡಿದರೆ ಸತ್ತ ಕೂಸು! ಆಗ, 'ಎಲಾ ಶಿಶುಚೋರೆ, ಶ್ರೀಮಂತರ ಮನೆಯ ದಾಸಿಯಂತೆ ನಟಿಸಿ ಅವರ ಮಗುವನ್ನು ಕದ್ದು, ಕೊಂದು ಚಿನ್ನಾಭರಣವನ್ನು ಗಂಟುಕಟ್ಟಿ ಕೂಸನ್ನು ಹೊತ್ತೆಗೆ ಎಸೆಯಲು ಹೊತ್ತುಕೊಂಡು ಬಂದಿರುವೆಯಾ' ಅಂದು ಸೆರೆಮನೆಗೆ ತಂದರು. ಆಗ ಅವಳಾಡಿದ ಮಾತು, ದೇವರಂತೆ ತಳಾರರು ದಾರಿಯಲ್ಲಿ ಸಿಕ್ಕು ಇಲ್ಲಿಗೆ ತಂದುಬಿಟ್ಟರು! ಒಂದು ಹೊತ್ತಿನ ಅನ್ನಕ್ಕೆ ದಾರಿಯಾಯಿತಂತೆ, ಆದರೆ ಯಾವಾಗಲೂ ಅರಸನ ಮನೆ ಹಾಳಾಗಲಿ, ಅವನ ಸೈನ್ಯ ಧೂಳಾಗಲಿ ಎಂದು ಶಾಪ ಹಾಕಿ ದೇವರಿಗೆ ಕೈ ಮುಗಿಯುವಳು. ಸಾಯುವ ವರೆಗೆ ಇವಳು ಈ ದೇವಮಂದಿರದ ಕಸ ಗುಡಿಸಿ, ರಂಗೋಲಿ ಇಡುವಳಂತೆ. ಸತ್ತಲ್ಲಿ, ಯಾರಾದರೂ ತನ್ನನ್ನು ನಾಯಿ, ಹದ್ದು, ಕಾಗೆಗೆ ಆಹಾರವಾಗುವಂತೆ ನಗರದಾಚೆ ಎಸೆದು ಬಿಡಿರಿ, ಆಗಲಾದರೂ ಈ ಪಾಪದ ಜನ್ಮಕ್ಕೆ ಮುಕ್ತಿ ದೊರಕುವುದೆನ್ನುವಳು... ಎಂದು ಗಾರೆಯವನು ಅವಳ ಕತೆ ಹೇಳಿದನು. ಅಮಾತ್ಯರೂ, ಪ್ರಭುಗಳು ತಂತಮ್ಮ ಮುಖ ಗವುಸಿನ ಮರೆಯಲ್ಲಿ ಪರಸ್ಪರ ಮುಖ ನೋಡಿಕೊಂಡು ಮಾತಿಲ್ಲದೆ ಮೌನವಾದರು.

★★★

ಮಹಾಪ್ರಭುಗಳು, ಅಮಾತ್ಯರು ದೇವಮಂದಿರ ಪರಿಶೀಲನಾರ್ಥ ಪ್ರದಕ್ಷಿಣಾ ಪಥದಲ್ಲಿ ಸಾಗುತ್ತ ಬರುತ್ತಿರಲು, ಅತ್ತ ವಿದಿಶಾ ನಗರದ ಉತ್ತರ ದಿಕ್ಕಿಗೆ ದೃಷ್ಟಿ ಹರಿಸಲು ಪ್ರವಾಹದೋಪಾದಿಯಲ್ಲಿ ಮಂದಿ ಸಂದೋಹ ಆಗಮಿಸುತ್ತಿರುವುದು ಕಂಡಿತು. ಅದನ್ನು ಕಂಡ ಅಮಾತ್ಯರು, 'ಯಲಾ ಮುಂದಿನ ವಾರದ ದೇವಾಲಯ ಮುಹೂರ್ತಕ್ಕೆ ಈಗಲೇ ಜನಸಾಗರ ಆಗಮಿಸುತ್ತಿರುವಂತಿದೆಯಲ್ಲ' ಎಂಬ ತಮ್ಮ ಅಭಿಪ್ರಾಯವನ್ನು ಪ್ರಭುಗಳ ಚಿತ್ತದ ಮುಂದಿಟ್ಟರು. ಈರ್ವರೂ ಬರುತ್ತಿರುವ ಗುಂಪಿನ ಬಗ್ಗೆ ಏನೂ ನಿರ್ಧರಿಸಲಾರದವರಾಗಿ ವೇಗದಲ್ಲಿ ಕುದುರೆಗಳನ್ನು ನಡೆಸಿದರು.

★★★